5052 (5990) ಶ್ರೀ ಪಾಟೀಲ್ ಡಿ.ಆರ್. (ಗದಗ್) :- ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು. ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ರಾಜ್ಯದಲ್ಲಿರುವ ಒಟ್ಟು ಅಲೋಪತಿ ವೈದ್ಯಕೀಯ ಮಹಾವಿದ್ಯಾಲಯಗಳು ಎಷ್ಟು;

ಆ) ಇದರಲ್ಲಿ, ಸರ್ಕಾರಿ ಅನುದಾನಿತ ಹಾಗೂ ಅನುದಾನ ರಹಿತ ಮಹಾವಿದ್ಯಾಲಯಗಳು ಎಷ್ಟು;

ಇ) ಈ ಮಹಾವಿದ್ಯಾಲಯಗಳಲ್ಲಿ ಲಭ್ಯವಾಗಿರುವ ಪ್ರಥಮ ವರ್ಷದ ಒಟ್ಟು ವೈದ್ಯಕೀಯ ಪ್ರವೇಶಾವಕಾಶಗಳು ಎಷ್ಟು ; ಇದರಲ್ಲಿ ಮೆರಿಟ್ ಸೀಟುಗಳು ಎಷ್ಟು :

ಈ) ಮೆರಿಟ್ ಸೀಟಿಮಲ್ಲಿ ಪ್ರವೇಶಾವಕಾಶ ಪಡೆದುಕೊಂಡ ಬಡ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಇರುವ ಸೌಲಭ್ಯಗಳು ಯಾವುವು;

ಉ) ಇತ್ತೀಚೆಗೆ ಫಿ ಹೆಚ್ಚಳದಿಂದ ಬಡವಿದ್ಯಾರ್ಥಿಗಳು ವೈದ್ಯಕೀಯ ಶಿಕ್ಷಣ ಪಡೆಯಲು ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಊ) ಈ ತೊಂದರೆಗಳನ್ನು ನಿವಾರಿಸಲು ಸರ್ಕಾರ ಕೈಕೊಳ್ಳಲಿರುವ ಕ್ರಮಗಳಾವುವು?

ಶ್ರೀ ಇಕ್ಬಾಲ್ ಆನ್ಸಾರಿ ವೈದ್ಯಕೀಯ ಶಿಕ್ಷಣ ಸಚಿವರು.

ಅ) 32

ಆ) ಸರ್ಕಾರಿ – 4
ಸರ್ಕಾರಿ ಅನುದಾನಿತ – ಯಾವುದೂ ಇಲ್ಲ
ಅನುದಾನ ರಹಿತ – 28

ಇ) ಒಟ್ಟು ವೈದ್ಯಕೀಯ ಸೀಟುಗಳು – 3585
ಮೆರಿಟ್ ಸೀಟುಗಳು – 1830

ಈ) ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ವಾರ್ಷಿಕ ಶುಲ್ಕ ರೂ. 16200 ಮತ್ತು ಖಾಸಗಿ ವೈದ್ಯಕೀಯ ಕಾಲೇಜುಗಳಲ್ಲಿ ಸರ್ಕಾರಿ ಕೋಟಾದಲ್ಲಿ ಸೀಟ್ ಪಡೆದ 30% ರಷ್ಟು ವಿದ್ಯಾರ್ಥಿಗಳಿಗೆ ವಾರ್ಷಿಕ 35000 ರೂ.ಗಳ ರಿಯಾಯಿತಿ ಶುಲ್ಕದ ಮೇಲೆ ಪ್ರವೇಶ ನೀಡಲಾಗುತ್ತಿದೆ

ಉ) ಬಂದಿದೆ

ಊ) 6 ಹೊಸ ಸರ್ಕಾರಿ ವೈದ್ಯಕೀಯ ಕಾಲೇಜುಗಳನ್ನು ಸ್ಥಾಪಿಸಲಾಗುತ್ತಿದೆ.

5053 (5991) ಶ್ರೀ ಪಾಟೀಲ್ ಡಿ.ಆರ್. (ಗದಗ್) :- ಮಾನ್ಯ ಗ್ರಾಮೀಣ ನೀರು ಸರಬರಾಜು, ನೈರ್ಮಲ್ಯ ಮತ್ತು ಪಂಚಾಯತ್ ರಾಜ್ ಇಂಜಿನಿಯರಿಂಗ್ ರಾಜ್ಯ ಸಚಿವರು. ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ರಾಜ್ಯದಲ್ಲಿ ಕುಡಿಯುವ ನೀರಿಗಾಗಿ ಬೇರೆ ಬೇರೆ ಯೋಜನೆಗಳಡಿಯಲ್ಲಿ ತೋಡಗಿಸಲಾಗಿರುವ ಬೋರ್‌ವೆಲ್‌ಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ವಿವರ ನೀಡುವುದು)

ಆ) ಇದರಲ್ಲಿ ನೀರಿಲ್ಲದ ಬೋರ್‌ವೆಲ್‌ಗಳೆಷ್ಟು, ಹಾಗೂ ನೀರು ಲಭ್ಯವಿರುವ ಬೋರ್‌ವೆಲ್‌ಗಳ ಸಂಖ್ಯೆ ಎಷ್ಟು;

ಇ) ನೀರಿಲ್ಲದ ಬೋರ್‌ವೆಲ್‌ಗಳನ್ನು ಮರು ಪೂರಣ ಮಾಡಿ ಅವು ನೀರಿನ ಬೋರ್‌ವೆಲ್‌ಗಳಾಗುವಂತೆ ಮಾಡಲು ಸರಕಾರ ಯಾವ ಯಾವ ಕ್ರಮಗಳನ್ನು ಕೈಗೊಂಡಿದೆ;